ಅಡ್ಮಿಟ್ ಮಾಡಿಕೊಂಡಿದ್ದಾರೆ ಈಗ ಗ್ರಾಂಟನ್ನು ವಿತ್‌ಡ್ರಾ ಮಾಡಿದ್ದಾರೆ ಅದನ್ನು ಸರ್ಕಾರದವರು ಯಾರಾದರೂ ಕೇಳುವವರು ಇದ್ದರೆ ನಾನು ಹೇಳುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೆ, ಅದನ್ನು ನಾವು ಹಿಂದೆ ಹೇಳಿದ್ದೇವೆ ಅದನ್ನು ಕೊಡುವುದಕ್ಕಾಗುವುದಿಲ್ಲವಂದು ಸರ್ಕಾರದ ಪರವಾಗಿ ಹೇಳಿದ್ದೇವೆ ಹಿಂದಿನ ಸರ್ಕಾರದಲ್ಲಿ ಅದನ್ನು ಮಾಡಬೇಕು ಎನ್ನುವಂಥ ಪ್ರಸ್ತಾವನೆ ಬಂದಿತ್ತು ಹೊಸ ಸರ್ಕಾರ, ಸಮ್ಮಿಶ್ರ ಸರ್ಕಾರ ಬಂದ ಮೇಲೆ ಅದನ್ನು ಕೊಡುವುದಕ್ಕಾಗುವುದಿಲ್ಲವೆನ್ನುವ ತೀರ್ಮಾನಕ್ಕೆ ಬಂದಿದ್ದೇವೆ ಮತ್ತೆ ಅದನ್ನೇ ಕೇಳತಕ್ಕ ಅಗತ್ಯ ಇಲ್ಲ ಮಾನ್ಯ ಅಧ್ಯಕ್ಷರೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಮಾನ್ಯ ಅಧ್ಯಕ್ಷರೆ, ಮತ್ತೆ ನಾನು ಏಕೆ ಕೇಳುತ್ತಿದ್ದೇನೆಂದರೆ ನಿಮ್ಮ ಸರ್ಕಾರಿ ಕೋಟಾದಲ್ಲಿ ವಿದ್ಯಾರ್ಥಿಗಳನ್ನು ಆ ಕಾಲೇಜಿಗೆ ಅಡ್ಮಿಟ್ ಮಾಡಿದ್ದೀರಿ ಈಗ ಅವರು ವಿದ್ಯಾರ್ಥಿಗಳನ್ನು ಅಲ್ಲಿಂದ ಹೊರಗಡೆ ಹಾಕಿದರೆ ಹೇಗೆ? ಏಕೆಂದರೆ ಅವರನ್ನು ಮೆರಿಟ್‌ನಲ್ಲಿ ತೆಗೆದುಕೊಂಡಿರುವುದು ಆ ವಿದ್ಯಾರ್ಥಿಗಳ ಪರಿಸ್ಥಿತಿಯೇನಾಗುತ್ತದೆ, ನೀವು ಅದನ್ನು ಅರ್ಥ ಮಾಡಿಕೊಳ್ಳಬೇಕು ಕಾಲೇಜಿಗೆ ಗ್ರಾಂಟನ್ನು ಕೊಟ್ಟಿದ್ದು ತಪ್ಪು ಸರಿ ಬಗ್ಗೆ ನಾನು ಚರ್ಚೆಯನ್ನು ಮಾಡುತ್ತಿಲ್ಲ ನೀವು ಗ್ರಾಂಟನ್ನು ಕೊಟ್ಟು ವಿದ್ಯಾರ್ಥಿಗಳನ್ನು ಅಲ್ಲಿಗೆ ಕಳುಹಿಸಿದ್ದೀರಿ ಕೌನ್ಸೆಲಿಂಗ್‌ನಲ್ಲಿ, ಆ ವಿದ್ಯಾರ್ಥಿಗಳ ಪರಿಸ್ಥಿತಿ ಏನಾಗುತ್ತದೆ?

ಶ್ರೀ ಕೆ ಶ್ರೀನಿವಾಸಗೌಡ ಮಾನ್ಯ ಅಧ್ಯಕ್ಷರೆ, ಪೂರ್ತಿ ಮಾಹಿತಿಯನ್ನು ತರಿಸಿ ಅದನ್ನು ನೋಡುತ್ತೇವೆ.

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ನೀವು ಮಾಹಿತಿ ತರಿಸುವುದೇನಿಲ್ಲ

ಶ್ರೀ ಕೆ ಶ್ರೀನಿವಾಸಗೌಡ ಮಾನ್ಯ ಅಧ್ಯಕ್ಷರೆ, ನಾಳೆ ಆ ಮಾಹಿತಿಯನ್ನು ತರಿಸಿ ಅದರ ಮೇಲೆ ನಾವು ಕ್ರಮವನ್ನು ಜರುಗಿಸುತ್ತೇವೆ

ಅಧ್ಯಕ್ಷರು ಮಾನ್ಯ ಹೆಗ್ಡೆಯವರೆ, ತಾವು ಅವರ ಗಮನಕ್ಕೆ ತಂದಿದ್ದೀರಿ, ಅವರು ಕ್ರಮ ತೆಗೆದುಕೊಳ್ಳುತ್ತಾರೆ ಬಿಡಿ

5 ಕರ್ನಾಟಕದಲ್ಲಿ ಶಿವಾಜಿ ಜಯಂತಿ ದಿನದಂದು ಸಾರ್ವತ್ರಿಕ ರಜೆಯನ್ನು ಘೋಷಿಸುವ ಬಗ್ಗೆ

ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಅಧ್ಯಕ್ಷರೆ, ಮಹಾರಾಷ್ಟ್ರದಲ್ಲಿ ಜಗಜ್ಯೋತಿ ಬಸವೇಶ್ವರ ದಿನವನ್ನು ಜನರಲ್ ಹಾಲಿಡೇ ಎಂದು ಮಾಡಿದ್ದಾರೆ ಆದರೆ ಕರ್ನಾಟಕದಲ್ಲಿ ಛತ್ರಪತಿ ಶಿವಾಜಿ ಮಹಾರಾಜ್ ಏನು ಇದ್ದರು, ಅವರು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟವರು 1630ನೇ ಇಸವಿ ಫೆಬ್ರವರಿ 19ರಲ್ಲಿ ಅವರು ಶಿವನೇರಿಯಲ್ಲಿ ಜನ್ಮತಾಳಿದವರು ಅವರು ಎಲ್ಲಾ ಧರ್ಮಗಳ ಜೊತೆಗೆ ಹೋದ ಜನಕ ರಾಜ ಎಂದು ನಮ್ಮ ಭಾರತ ದೇಶದಲ್ಲಿಯೇ ಹೆಸರುವಾಸಿ ಮಾಡಿದ ನಮ್ಮ ಛತ್ರಪತಿ ಶಿವಾಜಿಯವರು ನಮ್ಮ ಕರ್ನಾಟಕದಲ್ಲೂ ಮಹಾರಾಜ್ ಛತ್ರಪತಿ ಶಿವಾಜಿಯವರ ಜಯಂತಿಯನ್ನು ಕರ್ನಾಟಕದಲ್ಲೂ ಮಾಡಿ ಅಂದು ಜನರಲ್

ಹಾಲಿಡೇ ಎಂದು ಡಿಕ್ಲೇರ್ ಮಾಡಬೇಕು ಮತ್ತು ಈ ಜಯಂತಿಯನ್ನು ಸರ್ಕಾರದ ವತಿಯಿಂದ ಅದು ಆಚರಣೆಯಾಗಬೇಕು ಎಂದು ನಾನು ತಮ್ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೆ, ಅದನ್ನು ಪರಿಶೀಲಿಸುತ್ತೇವೆ

6 ಬೆಣ್ಣೆ ತೊರೆ ಯೋಜನೆ ಕುರಿತು

ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ್ (ಚಿತ್ತಾಪುರ) ಮಾನ್ಯ ಅಧ್ಯಕ್ಷರೆ, ತಾವು ಶೂನ್ಯ ವೇಳೆಯಲ್ಲಿ ನನಗೆ ಬೆಣ್ಣೆತೊರೆ ಯೋಜನೆ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ನಾನು ತಮಗೆ ಧನ್ಯವಾದಗಳನ್ನು ಹೇಳುತ್ತೇನೆ ಗುಲ್ಬರ್ಗ ಜಿಲ್ಲೆ ಅದು ಮುಖ್ಯಮಂತ್ರಿಯವರ ಜಿಲ್ಲೆ ಅಲ್ಲಿ ಎರಡು ಪ್ರಮುಖವಾದ ನೀರಾವರಿ ಯೋಜನೆಗಳಿದ್ದಾವೆ ಒಂದು, ಬೆಣ್ಣೆತೊರಾ, ಎರಡನೆಯದು ಅಮರ್ಜಾ ಎಂದು ಎರಡು ಯೋಜನೆಗಳಿವೆ ಬೆಣ್ಣೆತೊರಾ ಯೋಜನೆ 1972ರಲ್ಲಿ ಪ್ರಾರಂಭವಾಗಿದೆ 32 ವರ್ಷಗಳ ಪ್ರಾರಂಭದಲ್ಲಿ ಏಳು ಕೋಟಿ ರೂಪಾಯಿಗಳಲ್ಲಿ ಪ್ರಾರಂಭವಾದುದು ಈ ಯೋಜನೆ ಇವತ್ತು 230 ಕೋಟಿ ರೂಪಾಯಿ ಖರ್ಚಾದರೂ ಒಂದು ಹನಿ ನೀರು ಕೂಡ ಇವತ್ತು ರೈತರ ಜಮೀನಿಗೆ ಮುಟ್ಟಿಲ್ಲ ಎನ್ನುವ ಮಾತನ್ನು ನಾನು ಸದನಕ್ಕೆ ತಿಳಿಸಬೇಕಾಗುತ್ತದೆ ಈಗಾಗಲೇ ನಾವು ಮೊದಲೇ ರೈತರಿಗೆ ನೀರನ್ನು ಕೊಡಬೇಕಾಗಿತ್ತು ಇಲ್ಲಿ ನಾವು 230 ಕೋಟಿ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ ಆ 230 ಕೋಟಿ ರೂಪಾಯಿಗಳಲ್ಲಿ ಸುಮಾರು 100 ಕೋಟಿ ರೂಪಾಯಿಗಳು ಸೋರಿ ಹೋಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ ಮೊನ್ನೆ ನಾನು ಆ ಯೋಜನೆಗೆ ಭೇಟಿಯನ್ನು ಕೊಟ್ಟಾಗ ಅಲ್ಲೇನು ಅವ್ಯವಹಾರಗಳು ನಡೆದಿದೆ, ಎಷ್ಟು ದುಡ್ಡು ಹಾಳಾಗಿದೆ, ಪೋಲಾಗಿದೆ ಎಂದು ನಾನು ತಮ್ಮ ಗಮನಕ್ಕೆ ಮತ್ತು ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ ಈ ಯೋಜನೆಗಾಗಿ ಅನಾವಶ್ಯಕವಾಗಿ ಹಾಗೂ ಅಗತ್ಯಕ್ಕಿಂತ ಹೆಚ್ಚಿನ ಸಾಮಗ್ರಿಗಳನ್ನು ಖರೀದಿಸಲಾಗಿದ್ದು ಎಲ್ಲವೂ ಉಗ್ರಾಣದಲ್ಲಿ ಹಾಗೂ ಕಛೇರಿಯ ಆವರಣದಲ್ಲಿ ಕೊಳೆಯುತ್ತಿವೆ ಖರೀದಿಸಲಾದ ಬಹಳಷ್ಟು ಸಾಮಗ್ರಿಗಳು ನಿರುಪಯೋಗಿ ಮತ್ತು ಅನವಶ್ಯಕವಾಗಿ ಬೆಲೆಯಲ್ಲಿ ಕೂಡ ಅತೀ ಹೆಚ್ಚಿನ ದರದಲ್ಲಿ ಖರೀದಿಸಲಾಗಿದೆ ಎಂದು ಮೇಲುನೋಟಕ್ಕೆ ತಿಳಿದುಬರುತ್ತದೆ ಹಾಗೂ ಸಾಮಗ್ರಿಗಳನ್ನು ಕೆಲವೇ ವ್ಯಕ್ತಿಗಳು ಒಬ್ಬೊಬ್ಬರ ಹೆಸರಿನಲ್ಲಿ ನಾಲ್ಕಾರು ಫರ್ಮ್‌ಗಳ ಹೆಸರುಗಳನ್ನು ಇಟ್ಟುಕೊಂಡು ಕೆಎಸ್‌ಟಿ ಮತ್ತು ಸಿಎಸ್‌ಟಿ ನಂಬರ್‌ಗಳಿಲ್ಲದೇ ಇರುವ ಫರ್ಮ್‌ಗಳ ಹೆಸರಿನಲ್ಲಿ ಸರಬರಾಜು ಮಾಡಿದ್ದಾರೆ ಈಗಾಗಲೇ ಕೆಎಸ್‌ಟಿ ಮತ್ತು ಸಿಎಸ್‌ಟಿ ಇಲ್ಲದ ಈ ಬೋಗಸ್ ಫರ್ಮ್‌ಗಳ ಹೆಸರುಗಳನ್ನು ಇಟ್ಟುಕೊಂಡು ಏನು ಸರಬರಾಜು ಮಾಡಿದ್ದಾರೆ, ಅದನ್ನು ವಿಚಾರಣೆ ಮಾಡಬೇಕು ಮತ್ತು ಅವರೇನು ಕಳಪೆಮಟ್ಟದ ಸಾಮಾನುಗಳನ್ನು ಸರಬರಾಜು ಮಾಡಿದ್ದಾರೆ, ಅವರ ಮೇಲೆ ಕ್ರಿಮಿನಲ್